

# ಸೂರ್ಯ ಚಂದ್ರರ ಆತಂಕ

■ ಚಿಕ್ಕೋಬನಹಳ್ಳಿ ಚಾಂದ್ ಬಾಷ
ಕಲೆ: ಸಂತೋಷ್ ಸಸಿಹಿತ್ಲು

ಏನು ಚಂದ್ರಣ್ಣ ಯಾಕೋ ಮಂಕಾಗಿರುವೆಯಲ್ಲ? ಹಾಲಿನಂತೆ ಬೆಳ್ಳಗೆ ಹೊಳೆಯುತ್ತಿದ್ದವನು ಮಬ್ಬು ಮಬ್ಬಾಗಿ ಕಾಣುತ್ತಿರುವೆಯಲ್ಲ? ಸದಾ ನಸುನಗೆ ಮೊಗದಿಂದಿರುವವನು, ಹಗೆಮೊಗದಿಂದಿರುವೆಯಲ್ಲ? ಏನಿಲ್ಲ ಸೂರ್ಯಣ್ಣ ಇತ್ತೀಚೆಗೆ ಹಲವಾರು ದೇಶಗಳ ಮಧ್ಯೆ ನಡೀತಿರೋ ಯುದ್ಧದಿಂದ ಆಗ್ತಿರೋ ಅನಾಹುತ ಒಂದಾ ಎರಡಾ? ಸಾವಿರಾರು ಕ್ಷಿಪಣಿಗಳನ್ನು ಉಡಾಯಿಸುವುದನ್ನು ನೋಡಿದ್ರೆ ನಾನೇ ಸ್ಫೋಟವಾಗ್ತಿನೇನೋ ಅನ್ಸುತ್ತೆ! ಟನ್‌ಗಟ್ಟಲೆ ಬಾಂಬುಗಳನ್ನು ಹಾಕೋದನ್ನ ನೋಡಿದ್ರೆ, ನಾನೇ ಛಿದ್ರ ಆಗ್ತಿನೇನೋ ಅನ್ಸುತ್ತೆ! ಆ ಸ್ಫೋಟಗಳಿಂದ ಆಕಾಶವೆಲ್ಲ ಆವರಿಸಿರೋ ಕಡುಕಪ್ಪು ಹೊಗೆ ದೂಳು ಕುಡಿದು ನನಗೆ ಈ ಗತಿ ಬಂದಿದೆ. ಮನುಷ್ಯನ ಪರಿಸರದ ಬಗೆಗಿನ ಅಜ್ಞಾನ, ಅನಾಗರಿಕ ವರ್ತನೆ, ಬೇಜವಾಬ್ದಾರಿತನ ಕಂಡು ಅಸಹ್ಯ ಬರ್ತಿದೆ. ಸುಂದರ ಭೂಮಿಯನ್ನು ಸರ್ವನಾಶ ಮಾಡುತ್ತಿದ್ದಾನಲ್ಲವೆನ್ನುವ ಸಂಕಟ ಸುಡುತ್ತಿದೆ. ನೆಲಮೂಲ, ಜಲಮೂಲ, ಜೀವಮೂಲ, ವಾಯುಮೂಲಗಳಿಗೆ ಎದುರಾಗ್ತಿರೋ ಕಂಟಕವನ್ನು ನೋಡಿದ್ರೆ, ಮಾನವನೆಷ್ಟು ಕಟುಕನೆನ್ನುವುದು ಅರಿವಿಗೆ ಬರ್ತಿದೆ. ಯುದ್ಧ ಭೂಮಿಯಲ್ಲಿನ ಅತಿಘೋರ, ಅತಿಘಾತುಕ, ನರಕಸದೃಶ್ಯಗಳನ್ನು ಕಂಡರೆ ಭಯವಾಗ್ತಿದೆ. ನರಮಾನವನೇ ನರಮೇಧವನ್ನ ನಡೆಸುತ್ತಿರುವುದನ್ನು ನೋಡಿ ನಡುಕ ಹುಟ್ಟಿದೆ. ಅದರಲ್ಲೂ ಮಕ್ಕಳ ಮಾರಣಹೋಮ ಕಂಡು ಕರುಳು ಕಿವುಚಿದಂತಾಗುತ್ತಿದೆ.

ನಾನೆಂದರೆ ಕಣ್ಣರಳಿಸುವ
ಮುದ್ದಿನ ಗೊಂಬೆಗಳು
ನಾನೆಂದರೆ ಅಳುವ ನಿಲ್ಲಿಸಿ
ನಗುವ ನಗೆಬುಗ್ಗೆಗಳು
ನಾನೆಂದರೆ ಚಪ್ಪಾಳೆ ತಟ್ಟುವ
ಚೈತನ್ಯದ ಚಿಲುಮೆಗಳು
ನಾನೆಂದರೆ ಹಸಿವು ನೀಗಿಸಿಕೊಂಡು
ಪುಟಿಯುವ ಪುಟಾಣಿಗಳು,
ಇಂತಹ ಚಿತ್ತಾಪಹಾರಿ ಚಿಣ್ಣರನ್ನು ಪಟಾಕಿಯಂತೆ

ಚಿಂದಿ ಚಿಂದಿಯಾಗಿ ಉಡಾಯಿಸುವುದನ್ನ ಕಂಡು ಚಡಪಡಿಸುತ್ತಿದ್ದೇನೆ. ಛಿದ್ರಗೊಂಡ ದೇಹದ ಮಾಂಸ ತುಂಡುಗಳನ್ನು ಪೋಷಕರು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಕೊಂಡು ಹೋಗುವುದನ್ನು ನೋಡಿದ್ರೆ ಕಟುಕರಲ್ಲೂ ಕಣ್ಣೀರ ಕೋಡಿ ಹರಿಯುತ್ತೆ. ಕಂಡ ಕಂಡ ಆಸ್ಪತ್ರೆಗಳಲ್ಲಿ ಮಕ್ಕಳ ಆಕ್ರಂದನ ಕಿವಿಗಪ್ಪಳಿಸುತ್ತಿದೆ. ತುಂಡು ರೊಟ್ಟಿಗೆ, ಗುಟುಕು ನೀರಿಗೆ ಕೈ ಚಾಚುವ ಮಕ್ಕಳನ್ನು ಕಂಡ ಕಣ್ಣುಗಳು ರೋದಿಸುತ್ತಿವೆ. ಈ ಮಕ್ಕಳಿಗೆ ಬಂದಿರೋ ಗತಿ ನಮಗೂ ಬರಬಹುದೇನೋ ಎನ್ನುವ ಆತಂಕ ಶುರುವಾಗಿದೆ ಸೂರ್ಯಣ್ಣ!

ನೀನ್ ಹೇಳೊದೇನೋ ಸರಿ ಚಂದ್ರಣ್ಣ. ಆದ್ರೆ ನಾವ್ ಮೇಲಿದೀವಿ, ಜನ ಕೆಳಗಿದಾರೆ. ನಾವ್ಯಾಕ್ ಅಷ್ಟೊಂದ್ ಭಯ ಪಡಬೇಕು? ಹಂಗ್ಯಾಕಂತೀ ಸೂರ್ಯಣ್ಣ, ಈಗಾಗಲೇ ನಾಲ್ಕೈದು ದೇಶದ ಜನ ನನ್ನ ಮಡಿಲಿಗೆ ಲಗ್ಗೆ ಇಟ್ಟು ಹೋಗಿದ್ದಾರೆ. ನನ್ನ ಎದೆ ಭಾಗದಲ್ಲಿ ಅವರ ದೇಶದ ಗುರುತುಗಳನ್ನು ನೆಟ್ಟಿದ್ದಾರೆ. ಕೆಲವು ಮುತ್ಠಾಳರು ಚಂದ್ರನಲ್ಲಿ ನಿವೇಶನ ಮಾಡಿದೀವಿ, ಇನ್ನೂ ಕೆಲವರು